**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.**

**ಸಿಸಿ ನಂಃ 15/2020**

| | | |
|---|---|---|
| ಹೆಸರು | ಚಂದ್ರಶೇಖರ್ | ಸಿ.ಡಬ್ಲ್ಯೂ - **2** |
| ತಂದೆಯ ಹೆಸರು | ಮಾದೇಗೌಡ | ಪಿ.ಡಬ್ಲ್ಯೂ - **3** |
| ವಯಸ್ಸು | 48 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸ ಸ್ಥಳ | ಅಂಬರಹಳ್ಳಿ | |

ಸಾಕ್ಷಿಗೆ ದಿನಾಂಕಃ 02.04.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಎ ಪಿ ಪಿ ರರಿಂದ ಃ

ನನಗೆ ಚಾಸಾ 1, 3 ರಿಂದ 11 ರವರ ಪರಿಚಯವಿದೆ. ಮೃತ ಮಾದೇಗೌಡರವರು ನನ್ನ ತಂದೆಯಾಗಿರುತ್ತಾರೆ. ದಿ: 13.09.2019 ರಂದು ನನ್ನ ಚಿಕ್ಕಮ್ಮನ ಮಗ ರವಿ ಎಂಬುವವರು ನೆಲಮಾಕನಹಳ್ಳಿಯಲ್ಲಿ ತೀರಿಕೊಂಡ ಸಂಬಂಧವಾಗಿ ತಿಥಿ ಕಾರ್ಯಕ್ರಮ ಇದ್ದ ಮೇರೆಗೆ ನನ್ನ ತಂದೆ, ನಮ್ಮ ತಾಯಿ, ಸಹೋದರಿಯರು, ಚಾಸಾ 1, 5 ಮತ್ತು ನಾನು ಹೋಗಿದ್ದೆವು. ಚಾಸಾ 4 ಮತ್ತು ನನ್ನ ತಂದೆಯು ಬೈಕ್‌ನಲ್ಲಿ ಸದರಿ ಗ್ರಾಮದಿಂದ ಹೊರಟಿದ್ದು, ಸದರಿ ಬೈಕ್‌ನ್ನು ಚಾಸಾ 4 ರವರು ಚಾಲನೆ ಮಾಡುತ್ತಿದ್ದರು. ನಾನು ನೆಲಮಾಕನಹಳ್ಳಿಯಲ್ಲಿ ಇದ್ದಾಗ ಯಾರೋ ವ್ಯಕ್ತಿಯು ನನಗೆ ಕರೆ ಮಾಡಿ, ಅಪಘಾತವಾಗಿರುವ ಬಗ್ಗೆ ತಿಳಿಸಿರುತ್ತಾರೆ. ಆಗ ನಾವು ಸ್ಥಳಕ್ಕೆ ಹೋಗಿ ನೋಡಲಾಗಿ ನನ್ನ ತಂದೆಗೆ ಕಾಲು, ತಲೆಗೆ ಪೆಟ್ಟಾಗಿ, ಮೃತರಾಗಿದ್ದರು. ಚಾಸಾ 4 ರವರ ಕಾಲಿಗೆ ಪೆಟ್ಟಾಗಿತ್ತು. ಸ್ಥಳದಲ್ಲಿ ಇದ್ದ ವ್ಯಕ್ತಿಗಳನ್ನು ಅಪಘಾತದ ಬಗ್ಗೆ ವಿಚಾರಿಸಲಾಗಿ ಬುಲೇರೋ ವಾಹನ ಕೆ.ಎಂ.ದೊಡ್ಡಿ ಕಡೆಯಿಂದ ಮಳವಳ್ಳಿಯ ಕಡೆಗೆ ಬಂದು ನನ್ನ ತಂದೆಯು ಹೋಗುತ್ತಿದ್ದ ಬೈಕ್‌ಗೆ ಡಿಕ್ಕಿ ಪಡಿಸಿರುತ್ತದೆ ಎಂದು ತಿಳಿಸಿರುತ್ತಾರೆ. ನನ್ನ ತಂದೆಯನ್ನು ಮಳವಳ್ಳಿ ಆಸ್ಪತ್ರೆಯ ಶವಾಗಾರಕ್ಕೆ ತೆಗೆದುಕೊಂಡು ಹೋಗಿರುತ್ತಾರೆ. ಶವ ತನಿಖೆ ಮಾಡಿದಾಗ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಅಪಘಾತದ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಅಪಘಾತ ಪಡಿಸಿದ ವ್ಯಕ್ತಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯಾಗಿರುತ್ತಾರೆ. ಈಗ ನೋಡುತ್ತಿರುವ ನಿಪಿ 4 ರಿಂದ 6 ಫೋಟೋಗಳಲ್ಲಿ ಕಾಣುವ ವಾಹನವು ಆ ದಿನ ಅಪಘಾತ ಪಡಿಸಿದ್ದು, ನಿಪಿ 1 ರಿಂದ 3 ರಲ್ಲಿ ಕಾಣುವ ವಾಹನವು ಅಪಘಾತಕ್ಕೆ ಒಳಗಾಗಿರುತ್ತದೆ.

ಎಪಿಪಿ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.

<u>ಪಾಟೀ ಸವಾಲುಃ ಎ ಪಿ ಪಿ ರವರಿಂದ ಃ</u>

ಕೆಎ-06-ಎಎ-5668 ನಂಬರ್‌ನ ಬುಲೆರೋ ಗೂಡ್ಸ್ ವಾಹನದ ಚಾಲಕನಾದ ಆರೋಪಿಯು ಸದರಿ ವಾಹನವನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನನ್ನ ತಂದೆ ಮತ್ತು ಚಾಸಾ 4 ರವರು ಹೋಗುತ್ತಿದ್ದ ಬೈಕ್‌ಗೆ ಡಿಕ್ಕಿ ಪಡಿಸಿದ್ದು, ಅಗ ನಾನು ಹಿಂದುಗಡೆಯಿಂದ ಬೈಕ್‌ನಲ್ಲಿ ಬರುತ್ತಿದ್ದೆ ಎಂದರೆ ಸರಿ. ಅಪಘಾತವಾದಾಗ ನಾನು ನನ್ನ ಬೈಕ್‌ನ್ನು ನಿಲ್ಲಿಸಿ ನೋಡಿರುತ್ತೇನೆ ಎಂದರೆ ಸರಿ. ಚಾಸ 1 ರವರು ಅಪಘಾತದ ಸಂಬಂಧವಾಗಿ ದೂರು ನೀಡಿರುತ್ತಾರೆ ಎಂದರೆ ಸರಿ. ಅಪಘಾತವನ್ನು ನಾನು ಪ್ರತ್ಯಕ್ಷವಾಗಿ ನೋಡಿರುತ್ತೇನೆ ಎಂದರೆ ಸರಿ.

<u>ಪಾಟೀ ಸವಾಲು ಃಆರೋಪಿ ಪರ: ಶ್ರೀ. ಎಂ.ಎನ್‌ಆರ್. ವಕೀಲರಿಂದ</u>

ಚಾಸಾ 4 ರವರಿಗೆ ಬೈಕ್ ಚಾಲನೆ ಮಾಡಲು ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಅವರ ಡಿ.ಎಲ್. ಅನ್ನು ನೋಡಿರುವುದಿಲ್ಲ. ಚಾಸಾ 4 ರವರು ಆ ದಿನ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ನಾನು ಗಮನಿಸಿರುವುದಿಲ್ಲ. ಸಾಮಾನ್ಯವಾಗಿ ತಿಥಿ ಕಾರ್ಯದಲ್ಲಿ ಮದ್ಯಪಾನ ಮಾಡುತ್ತಾರೆ ಎಂದರೆ ಸರಿಯಲ್ಲ. ಚಾಸಾ 4 ರವರು ಮತ್ತು ನನ್ನ ತಂದೆ ಮದ್ಯಪಾನ ಮಾಡಿದ್ದರು ಎಂದರೆ ಸರಿಯಲ್ಲ. ರಸ್ತೆಯನ್ನು ದಾಟುವಾಗ ಇಂಡಿಕೇಟರ್ ಹಾಕದೇ ಬೈಕ್‌ನ್ನು ತಿರುಗಿಸಿ ಅವರ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ನನಗೆ ಅಪಘಾತದ ವಿಚಾರವನ್ನು ತಿಳಿಸಲು ಕರೆ ಮಾಡಿದಾಗ 2 ಗಂಟೆಯಾಗಿತ್ತು. ನಾನು ಸದರಿ ಕಾಲಕ್ಕೆ ನೆಲಮಾಕನಹಳ್ಳಿ ಗ್ರಾಮದಲ್ಲಿಯೇ ಇದ್ದೆ. ಆ ರೀತಿ ಕರೆ ಮಾಡಿದ ನಂತರ ನಾನು ಅಪಘಾತ ಸ್ಥಳಕ್ಕೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವು ಯಾರ ತಪ್ಪಿನಿಂದ ಆಗಿದೆ ಎಂದು ನಾನು ಖುದ್ದಾಗಿ ನೋಡಿಲ್ಲ ಎಂದರೆ ಸರಿ. ನಾನು ಯಾವ ದಿನಾಂಕದಂದು ಹೇಳಿಕೆ ನೀಡಿರುತ್ತೇನೆ ಎಂದು ನೆನಪಿರುವುದಿಲ್ಲ. ಹೇಳಿಕೆಯಲ್ಲಿ ಏನು ಹೇಳಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ. ನಾನು ನ್ಯಾಯಾಲಯದ ಮಾತ್ರ ಆರೋಪಿಯನ್ನು ನೋಡಿರುತ್ತೇನೆ ಎಂದರೆ ಸರಿ. ಅಪಘಾತ ಸಂಬಂಧವಾಗಿ ಪರಿಹಾರದ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ನನ್ನ ತಂದೆಯ ತಪ್ಪಿನಿಂದ ಅಪಘಾತವಾಗಿದ್ದರೂ ಸಹ ಪರಿಹಾರ ಬರಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.